ಸಂಯುಕ್ತ ಕರ್ನಾಟಕ
ಬಸವ ಭೂಮಿ
ಮಂಗಳವಾರ 23 । ಜುಲೈ । 2019

basavabhoomi123@gmail.com

# ಸಂರಕ್ಷಣೆ ಇಲ್ಲದೆ ಸೊರಗುತ್ತಿರುವ ಇಬ್ರಾಹಿಂ ರೋಜಾ

ವಿಜಯಪುರದಲ್ಲಿ ದಕ್ಷಿಣ ಭಾರತದ ತಾಜ್ ಮಹಲ್ ಎಂದೇ ಪ್ರಖ್ಯಾತವಾಗಿರುವ ಇಬ್ರಾಹಿಂ ರೋಜಾ ಈಗ ಸಂರಕ್ಷಣೆ ಇಲ್ಲದೇ ಸೊರಗುತ್ತಿದೆ.

ಇಬ್ರಾಹಿಂ ಕಲೋಪಾಸಕನಾಗಿದ್ದನಲ್ಲದೇ ಸ್ವತಃ ಒಬ್ಬ ಕಲಾವಿದನಾಗಿದ್ದ ಕೂಡ. ಆತ ಅನೇಕ ಸಂಗೀತ ವಾದ್ಯಗಳನ್ನು ನುಡಿಸುತ್ತಿದ್ದ ಮತ್ತು ಹಾಡುತ್ತಿದ್ದ. ಆ ಕಾಲದಲ್ಲಿ ದೊರೆತ ಚಿತ್ರಗಳು ನಮಗೆ ಇಂದಿಗೂ ನೋಡಲು ಸಿಗುತ್ತವೆ. ಮೊದಲೆಲ್ಲ ಅರಸರು ತಮ್ಮ ಪ್ರತಿಭೆಯನ್ನು ಗೋಡೆಯ ಮೇಲೆ ರಚಿಸುತ್ತಿದ್ದರು. ತಮ್ಮ ಬಯಕೆಗಳು, ತಮ್ಮ ಸಂಗೀತ, ನೃತ್ಯಗಳು, ಪುಸ್ತಕಗಳು, ಬೇರೆ ಕ್ಷೇತ್ರಕ್ಕೆ ಹೋಗುವ ದಾರಿ, ಅವರ ಸಂಸ್ಕೃತಿ, ಪರ್ಶಿಯನ್ ಭಾಷೆ, ಭಾರತದ ಜನರ ಸೌಂದರ್ಯ ಲಹರಿ, ವಿಶಿಷ್ಟವಾದ ಶೈಲಿಗಳು "ರಾಗ ಮಾಲಾ" ಚಿತ್ರವನ್ನು ಗೋಡೆಯ ಮೇಲೆ ಮುದ್ರಿಸಿದ್ದಾರೆ.

ಈ ಚಿತ್ರಕಲೆಯನ್ನು ಪ್ರೋತ್ಸಾಹಿಸಲು ಸರಕಾರ ಮುಂದೆ ಬಂದರೂ ಕೂಡ ಪ್ರವಾಸಿಗರು ಇದನ್ನು ಹಾಳು ಮಾಡುವಲ್ಲಿ ಎತ್ತಿದ ಕೈಯಾಗಿದೆ. ಹಳೆ ಕಾಲದ ಸಂಸ್ಕೃತಿ, ಕಲಾಕೃತಿಯನ್ನು ಸಾಮಾನ್ಯ ಜನರು, ಪ್ರವಾಸಿಗರು ಹಾಳು ಮಾಡುತ್ತಿದ್ದಾರೆ. ಗೋಡೆಯ ಮೇಲೆ ಇಲ್ಲಸಲ್ಲದ ಹೆಸರುಗಳು ಬರೆಯುವ ಮುಖಾಂತರ ಮತ್ತು ತಮ್ಮ ಹೆಸರುಗಳನ್ನೋ, ತಮ್ಮ ಆಪ್ತರ ಹೆಸರುಗಳನ್ನೋ ಕೆತ್ತುವ ಮೂಲಕ ಅಂದಿನ ಕೊಡುಗೆ ಇರುವ ಯುವ ಪೀಳಿಗೆ ಅವುಗಳನ್ನು ನಾಶ ಪಡಿಸುತ್ತಿದೆ.

ಸಂಗೀತ, ಸೌಂದರ್ಯ ಮತ್ತು ಮಾಧುರ್ಯಗಳನ್ನು ಹೊಂದಿದ ಕನಸಿನ ನಗರವನ್ನು ಇಲ್ಲಿ ಪ್ರತಿಷ್ಠಾಪಿಸುವುದು ಇಬ್ರಾಹಿಮ್‌ನ ಕನಸಾಗಿತ್ತು. ಆ ಕನಸು ಈಡೇರಿದರೂ ಕೂಡಾ, ಪ್ರವಾಸೋದ್ಯಮದ ಮಹತ್ವ ಗೊತ್ತಿಲ್ಲದ ಜನರು ಆ ಕಲಾಕೃತಿಯನ್ನು [illegible] ಪಾತ್ರ ವಹಿಸುತ್ತಿದ್ದಾರೆ. ಯುವ ಪೀಳಿಗೆ ಅಕ್ಷರಸ್ಥರಾಗಿದ್ದರೂ ಕೂಡಾ ಇಂತಹ ಕೃತ್ಯಗಳನ್ನು ಮಾಡುವಲ್ಲಿ ವಿಷಾದಕರ. ಆದರೆ ಮುಂದಿನ ಪೀಳಿಗೆಗೆ ಮತ್ತು ಯುವ ಪೀಳಿಗೆಗೆ ಸ್ಮಾರಕಗಳ ಪರಿಚಯ ಬಹಳ ಮುಖ್ಯವಾಗಿದೆ. ಇದು ಕಾಪಾಡಿಕೊಳ್ಳುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದೆ.

ವಿಜಯಪುರ ನಗರಕ್ಕೆ ಅನೇಕರು ವಲಸೆ ಬಂದು ಆಗಿನ ಕಾಲದ ಸಂಸ್ಕೃತಿ ಕಲೆಯನ್ನು ಆನಂದಿಸಬೇಕು. ಹೊರತು ಅಲ್ಲಿನ ಗೋಡೆಗಳ ಮೇಲೆ ಯಾವುದೇ ತೆರನಾದ ಹೆಸರುಗಳನ್ನು ಕೆತ್ತಬಾರದು. ಕನ್ನಡ ಸಂಸ್ಕೃತಿ ಇಲಾಖೆ ನವರಸಪುರದಲ್ಲಿ 1990 ರಿಂದ ಪ್ರತಿ ವರ್ಷ ನವರಸಪುರ ಸಂಗೀತ ಉತ್ಸವವನ್ನು ನಡೆಸಿದ್ದು, ಇಬ್ರಾಹಿಮ್‌ನ ಈ ಉದ್ದೇಶವನ್ನು ಪೂರೈಸುವ ಕಾರ್ಯದಲ್ಲಿ ತೊಡಗಿತ್ತು, ಅದರ ಜೊತೆಗೆ ಇಲಾಖೆಗಳು ಈ ತೆರನಾದ ಕೆಲಸಗಳಿಗೆ ಮಹತ್ವದ



## ಉಳಿಸಿಕೊಡಬೇಕಾಗಿದೆ

ದಕ್ಷಿಣ ಭಾರತದ ತಾಜ್ ಮಹಲ್ ಎಂದೇ ಪ್ರಖ್ಯಾತವಾಗಿರುವ ವಿಜಯಪುರದ ಇಬ್ರಾಹಿಂ ರೋಜಾದಲ್ಲಿ ಪವಿತ್ರ ಗ್ರಂಥ ಕುರಾನ್ ಇದೆ. ಈಗಿನ ಪೀಳಿಗೆಗೆ ಇದು ಬಹಳಷ್ಟು ಉಪಯುಕ್ತ ಹಾಗೂ ನೋಡಲು ಆನಂದವನ್ನುಂಟು ಮಾಡುವ ಕಲಾಕೃತಿಯನ್ನು ಹೊಂದಿದೆ. ಆದರೆ ಯುವ ಪೀಳಿಗೆಯೇ ಗೋಡೆಯ ಮೇಲೆ ಅಸಂಬದ್ಧವಾಗಿ ಹೆಸರುಗಳನ್ನು ಬರೆಯುವುದರ ಮುಖಾಂತರ ಹಾಳುಮಾಡುತ್ತಿದೆ. ಮುಂದಿನ ಪೀಳಿಗೆಗೆ ಇದನ್ನು ಉಳಿಸಿಕೊಡಬೇಕಾದರೆ ಇದರ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

–ಶಂಕರ
ಪ್ರವಾಸಿಗ ವಿಜಯಪುರ

ಸುಮಾ ಪವಾರ, ವಿಜಯಪುರ.

ಕ್ರಮ ಕೈಗೆದುಕೊಂಡು ಗೋಡೆಯ ಮೇಲೆ ಯಾವುದೇ ತೆರನಾದ ಕೆತ್ತನೆಗೆ ಅವಕಾಶ ಮಾಡಿಕೊಡಬಾರದು.

ಈ ತರಹದ ಕ್ರಿಯೆಗಳು ಮುಂದುವರಿದರೆ ಮುಂಬರುವ ಪೀಳಿಗೆಗೆ ಇತಿಹಾಸವನ್ನು ನೋಡಲು ಆಗುವುದಿಲ್ಲ. ಇಬ್ರಾಹಿಂ ರೋಜಾ ಅಷ್ಟೇ ಅಲ್ಲದೇ ವಿಜಯಪುರವು ಗುಮ್ಮಟನಗರಿ ಎಂದೇ ಕರೆಸಿಕೊಂಡಿರುವ ಗೋಲ್‌ಗುಮ್ಮಟ ಸ್ಮಾರಕವೂ ಕೂಡಾ ಈ ಸಮಸ್ಯೆಯನ್ನು ಎದುರಿಸುತ್ತಿದೆ. ಆದ ಕಾರಣ ಜನರಿಗೆ ಗೋಡೆಯ ಮೇಲೆ ಹೆಸರುಗಳನ್ನು ಬರೆಯುವುದಾಗಲಿ ಮತ್ತು ಕೆತ್ತುವುದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ನನ್ನ ಅಭಿಪ್ರಾಯ.

**ಇತಿಹಾಸ**

ಅಲಿ ಆದಿಲ್ ಶಾಹ್‌ನ ಕಾಲವಾದ ನಂತರ ಆತನ ತಮ್ಮ ತಹಾಮ್ ಅಸಪ್ ಆದಿಲ್ ಶಾಹನ್ ಮಗ ಇಬ್ರಾಹಿಂ ಆದಿಲ್ ಶಾಹ್ 1580ರಲ್ಲಿ ಪಟ್ಟಕ್ಕೇರಿದಾಗ ಆತ ಇನ್ನೂ ಒಂಭತ್ತು ವರ್ಷದ ಹುಡುಗ. ಇವನ ಪರವಾಗಿ ಈತನ ದೊಡ್ಡಮ್ಮ ಚಾಂದ್ ಬೀಬಿ ಸುಲ್ತಾನಳು ಸಮರ್ಥವಾಗಿ ರಾಜ್ಯ ಭಾರ ನಡೆಸಿದಳು. ಇಬ್ರಾಹಿಂ ಆದಿಲ್ ಶಾಹ್ ಪಟ್ಟಕ್ಕೇರಿದ ನಂತರ ತನ್ನ ಜ್ಞಾನ ದಾಹ, ಪರಮತ ಸಹಿಷ್ಣುತೆ ಮತ್ತು ಆಧ್ಯಾತ್ಮಿಕ ಒಲವಿನಿಂದ ಎಲ್ಲಿಲ್ಲದ ಎತ್ತರಕ್ಕೆ ಬೆಳೆದು ನಿಂತನು. ಇಬ್ರಾಹಿಂ ಆದಿಲ್ ಶಾಹ್ ಪಟ್ಟಕ್ಕೇರಿದಾಗ ವಿಜಾಪುರ ರಾಜ್ಯ ಸುರಕ್ಷಿತವಾಗೇನೂ ಇರಲಿಲ್ಲ. ಅದು ಮೊಘಲರ ದಾಳಿಗೆ ತುತ್ತಾಗುವುದರಲ್ಲಿತ್ತು. ತನ್ನ ಸುತ್ತಲಿನ ರಾಜ್ಯಗಳ ಗೆಳೆತನ ಬೆಳೆಸಿ ವಿಜಾಪುರದಲ್ಲಿ ಶಾಂತಿಯನ್ನು ಕಾಯ್ದುಕೊಂಡ.

CS Scanned with CamScanner